ಹಂದಿಯಾಗುವುದಾದರೆ ಈ ಜನ್ಮದಲ್ಲೇ ಆಗಬೇಕು. ಆಗಲಾಗುವುದೇ?

ತಪಸ್ಸು ಮಾಡಿ, ಹರನನ್ನೋ ಹರಿಯನ್ನೋ ಬ್ರಹ್ಮನನ್ನೋ ಅಥವಾ ವರವೀವ ಶಕ್ತಿಯುಳ್ಳ ಇನ್ನಾವ ದೇವರನ್ನೋ ಕುರಿತು, ಕಾಮರೂಪ ಪಡೆವ ವರ ಪಡೆಯಬೇಕು. ತಪೋ ತಾಣವಾವುದು? ಸ್ವಾಮೀಜಿಯೊಬ್ಬರ ದಿವ್ಯೋಪದೇಶ, 'ಮನೆಯೇ ತಪೋವನ, ಕಲಿಯುಗದಲ್ಲಿ ಮನವೇ ತಪೋ ತಾಣ...' ಎಡಬಲಕ್ಕೆ ಆಡಿಸಿದ ನನ್ನ ತಲೆಯಲ್ಲಿ ವರಾಹಮೂರ್ತಿ.

ನನ್ನಜ್ಜಿ ಹೇಳಿ, ನಾನು ಕೇಳಿದ್ದ, 'ಚಂದಮಾಮ'ದಲ್ಲಿ ಓದಿದ ಕಥೆಗಳಲ್ಲಿ ಪರಕಾಯ ಪ್ರವೇಶ ಮಾಡಿದ ಪ್ರಸಂಗಗಳು ನೆನಪಾದವು. ಶಂಕರಾಚಾರ್ಯರು ಪರಕಾಯ ಪ್ರವೇಶ ಮಾಡಿದ್ದರೆಂದು ಓದಿದ್ದು ಸಹ ನೆನಪಿಗೆ ಬಂದಿತು. ಹೇಗೋ ಈ ವಿದ್ಯೆಯೇನಾದರೂ ಸಿದ್ಧಿಸಿಬಿಟ್ಟರೆ ಯಾವುದಾದರು ಸತ್ತ ಹಂದಿಯ ದೇಹ ಪ್ರವೇಶ ಮಾಡಿಬಿಡಬಹುದು. ಆಗ... ಅಯ್ಯೋ, ಆಗಲೂ ಇರುವುದು ನನ್ನ ಮನಸ್ಸೇ. ಹಂದಿಯ ಮನಸ್ಸೆಲ್ಲಿ ಬರುತ್ತೆ?

ಇವಾವುವೂ ನನ್ನ ಮಟ್ಟಿಗೆ ಸಂಭವವಲ್ಲ. ಆದರೆ ಇವೊತ್ತಿನ ದಿನಗಳಲ್ಲಿ ಇಂಥದೊಂದು ನನ್ನಲ್ಲಿ ನಡೆಯಿತೆಂದು ಪ್ರಚಾರಕ್ಕಿಡುವುದು, ಅದಕ್ಕೆ ರೋಚಕತೆ ಕೊಟ್ಟು ಹೇಳುವುದು ಸುಲಭ. ಈ ವಿಷಯ ಮಾತನಾಡುವವರ ತಂಡವೇ ಕಟ್ಟಿಕೊಳ್ಳುತ್ತದೆ. ಆದರೆ ಹೋಗಿಹೋಗಿ ಅಸಹ್ಯಕರ ಪ್ರಾಣಿಯಾದ ಹಂದಿಯೇ ಏಕಾಗಬೇಕಿತ್ತು? ಹಸುವೋ ಎತ್ತೋ ಜಿಂಕೆಯೋ, ಮೊಲವೋ, ಗಿಳಿ, ಕೋಗಿಲೆ, ನವಿಲು, ಗುಬ್ಬಚ್ಚಿಯೋ ಆಗಬಹುದಿತ್ತಲ್ಲ ಎಂದು ಅಸಹ್ಯಿಸಿಕೊಂಡು ಸುಮ್ಮನಾದರೂ ಆಗಬಹುದು. ಅಂಥವರಿಗೆ ಹಂದಿಯ ಬಗ್ಗೆ ಮಾತನಾಡುವುದು ಇರುಸುಮುರುಸಿನ ಸಂಗತಿ. ಹಂದಿಯೇ ತಾನೆ ನನ್ನನ್ನು ಆಲೋಚನೆಗೆ ತಂದಿದ್ದು.



ಆಗಬೇಕೆಂದುಕೊಂಡಿದ್ದು ಯಾವ ಮಾರ್ಗ ದಿಂದಲೂ ಆಗುವಂತಿರಲಿಲ್ಲ. ಆಗುವಂತೆ ಮಾಡುವ ಸಾಧಕ ಗುರುವಾಗಲಿ, ಮರ್ಗದರ್ಶಿಯಾಗಲಿ ಸಿಕ್ಕಿದ್ದಿಲ್ಲ. ಸಿಕ್ಕಿದರೆ ಮುಂದುವರಿಯೋಣವೆಂದುಕೊಂಡೆ.

ಬಿಡುವಾದಾಗಲೆಲ್ಲ ಹೋಗಿ ಆ ತಾಯಿ ಹಂದಿ, ಮರಿಗಳನ್ನು ಗಮನಿಸುತ್ತಿದ್ದೆ. ಮರಿಗಳು ಆಡುತ್ತಿದ್ದಾಗ ಆ ತಾಯ ಕಣ್ತುಂಬಾ ಆನಂದ ಕಾಣುತ್ತಿತ್ತು. ಹೀಗೊಂದು ದಿನ ಹೋದಾಗ ಮರಿಯೊಂದು ಸತ್ತು ಬಿದ್ದಿತ್ತು. ತಾಯ ಕಣ್ತುಂಬಾ ನೀರು. ಅದು ಆ ಕರುಳ ವೇದನೆಯನ್ನು ಹೇಳುತಿತ್ತು.

ಪರಿಚಿತನಾದ ನನಗೆ ಅವಳು ತನ್ನ ಗುರುಗುರು ದನಿಯ ಮೂಲಕ ಏನನ್ನೋ ಅನ್ನುವುದಕ್ಕಿಂತ ತನ್ನ ಕರುಳ ಶೋಕವನ್ನು ಹೇಳಿಕೊಳ್ಳುತ್ತಿರುವಳು ಅಂದು ಕೊಂಡೆ. ಹೇಗೆ ಸಾಂತ್ವನ ಹೇಳುವುದು? ಅವಳ ಭಾಷೆ ನನಗಿಲ್ಲ, ನನ್ನ ಭಾಷೆ ಅವಳಿಗಿಲ್ಲ! ಆದರೂ ಹೇಳಿದೆ, 'ಸಾವು ವಯಸ್ಸನ್ನು ನೋಡಿ ಬರುವುದಿಲ್ಲಮ್ಮ. ಸಾಯುವ ವಯಸ್ಸಲ್ಲವೆಂದು ಅದು ಬಿಟ್ಟು ಹೋಗದು ತಾಯಿ. ದುಃಖಿಸಿ ಸುಮ್ಮನಾಗುವುದಷ್ಟೇ ನಮಗಿರುವ ಆಯ್ಕೆ' ಆ ಅಮ್ಮ ಗುರುಗುರು ಗುರುಗುರು ಅಂದಳು. 'ಸಾಯುವವರಿಗೆ ನಮ್ಮ ಆಯಸ್ಸನ್ನು ಧಾರೆಯೆರೆಯುವ ಹಾಗಿದ್ದರೆ... ಹಾಗಿಲ್ಲವಲ್ಲ ಅಮ್ಮನೆ' ಅಂದೆ. ಅವಳು ಕೊರಳನ್ನು ನೆಲಕ್ಕಿಟ್ಟು ಸತ್ತ ಮರಿಯನ್ನೇ ನೋಡುತ್ತಿದ್ದಳು. ಆ ಕಣ್ನೋಟದ ಭಾವವೇನೆಂದು ನನಗೆ ತಿಳಿಯಲಿಲ್ಲ.

ಅದನ್ನು ಸಾಕಿದ್ದಾತ ಬಂದ. ತಾಯಿಯನ್ನು ಉಳಿದ ಮರಿಗಳೊಂದಿಗೆ ಗೂಡಿಗೆ ಸೇರಿಸಿ, ಮಣ್ಣಿಗೆ ಹಾಕಲು ಸತ್ತ ಮರಿಯನ್ನು ತೆಗೆದುಕೊಂಡು ಹೋದ.

ಮಾರನೆಯ ದಿನ ಹೋದೆ. ಮರಿಗಳು ಆಟವಾಡುತ್ತಿದ್ದವು. ಕಣ್ಣಲ್ಲಿ ಆನಂದ ತುಂಬಿಕೊಂಡು ತಾಯಿ ನೋಡುತ್ತಿದ್ದಳು. ನನಗವಳ ತಲೆಯನ್ನು ನೇವರಿಸಬೇಕೆನಿಸಿತು. ಬಳಿ ಹೋಗಿ ಕುಳಿತು ತಲೆ, ಬೆನ್ನು ನೇವರಿಸಿದೆ. ಅವಳು ಆಪ್ಯಾಯತೆಯ ಆ ಸ್ಪರ್ಶಸುಖದಲ್ಲಿ ಗುರುಗುರು ಅಂದುದರ ಅರ್ಥವೇನೆಂದು ನಾನು ಕೇಳಿಕೊಳ್ಳಲಿಲ್ಲ. ●